(ಸಾಕ್ಷಿಯನ್ನು ದಿನಾಂಕಃ 03-07-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಿ ಡಬ್ಲೂ-4**

ಸಾಕ್ಷಿದಾರರ ಹೆಸರು: ಬೆಟ್ಟೇಗೌಡ

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರುಃ ಶ್ರೀ ಎಂಕೆಜೆ ರವರಿಂದ**

ನನಗೆ ಈ ದಾವೆಯಲ್ಲಿ ಸಾಕ್ಷ್ಯವನ್ನು ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಬಂದಿರುವುದಿಲ್ಲ. ನನಗೆ ಸಾಕ್ಷ್ಯವನ್ನು ನುಡಿಯುವಂತೆ ಶಿವಣ್ಣರವರು ಕರೆದುಕೊಂಡು ಬಂದಿರುತ್ತಾರೆ. ನಾನು ಪರವಾನೆಗಿ ಹೊಂದಿದ ಪತ್ರಬರಹಗಾರರು ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಪ್ರತಿದಿನ ಎಷ್ಟು ದಾಖಲೆಗಳನ್ನು ನೋಂದಣಿ ಮಾಡಿಸಿರುತ್ತೇವೆ ಎಂಬ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ಮಾಹಿತಿ ಕೊಡಬೇಕು ಎಂದರೆ ಸರಿ. ನಾನು ಲೆಡ್ಜರ್ ಅನ್ನು ನಿರ್ವಹಣೆ ಮಾಡಬೇಕು ಎಂದರೆ ಸರಿ. ಸದರಿ ಲೆಡ್ಜರ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ 1 ಕ್ರಯದ ಕರಾರು ಪತ್ರವನ್ನು ನಾನೇ ತಯಾರು ಮಾಡಿರುತ್ತೇನೆ. ನಿಪಿ 1 ಕ್ರಯದ ಕರಾರು ಪತ್ರವನ್ನು ತಯಾರು ಮಾಡುವುದಕ್ಕೆ ಮುನ್ನ ಆರ್.ಟಿ.ಸಿ ಮತ್ತು ಆಧಾರ್ ಕಾರ್ಡ್ ಅನ್ನು ನೋಡಿರುತ್ತೇನೆ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಬೇರೆ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. 1ನೇ ಪ್ರತಿವಾದಿ ರಮೇಶ್ ರವರಿಗೆ ಸಂಬಂಧಪಟ್ಟ ವಂಶವೃಕ್ಷವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ನಿಪಿ 1 ಕ್ರಯದ ಕರಾರು ಪತ್ರವನ್ನು ಮಮತಾ ಡಿಟಿಪಿ ಸೆಂಟರ್ ನಲ್ಲಿ ತಯಾರು ಮಾಡಿರುತ್ತೇನೆ. ನಿಪಿ1 ಕ್ರಯದ ಕರಾರು ಪತ್ರದಲ್ಲಿ ಸದರಿ ವಿಚಾರ ನಮೂದಾಗಿರುವುದಿಲ್ಲ. ನಿಪಿ1 ಪತ್ರವು ಎಷ್ಟು ಗಂಟೆಗೆ ಯಾವ ದಿನಾಂಕ ತಯಾರು ಮಾಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಿಪಿ1 ಕ್ರಯಾದ ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ ನನ್ನ ಸಮಕ್ಷಮ ಯಾವುದೇ ಮಾತುಕತೆ ಆಗಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಹಣಕಾಸಿನ ವ್ಯವಹಾರವು ಆಗಿರುವುದಿಲ್ಲ ಎಂದರೆ ಸರಿ. ಕ್ರಯದ ಕರಾರು ಪತ್ರಕ್ಕೆ ಸದರಿ ದಿನದ ಮಾರುಕಟ್ಟೆ ಮೌಲ್ಯವನ್ನು ಎಷ್ಟು ಇತ್ತು ಎಂದು ತೋರಿಸಲು ನಿಪಿ1ರ ಜೊತೆಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ1 ಕ್ರಯದ ಕರಾರು ಪತ್ರವು ಹಣಕಾಸಿನ ಭದ್ರತೆಗಾಗಿ ಆಗಿರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ವಾದಿಯಿಂದ 3 ಲಕ್ಷ ಹಣವನ್ನು ಪಡೆದಿದ್ದರು ಅದರ ಭದ್ರತೆಗಾಗಿ ಪತ್ರವನ್ನು ಬರೆಸಿ ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೌಲ್ಯವು ಮೊದಲಿಗಿಂತ ಈಗ ಹೆಚ್ಚಾಗಿಗುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೌಲ್ಯವು 37 ಲಕ್ಷಕ್ಕಿಂತ ಹೆಚ್ಚಾಗಿದ್ದು ಪ್ರತಿವಾದಿಯು ಯಾವತ್ತು ಸಹ ವಾದಿಗೆ

ಮಾರಟ ಮಾಡುತ್ತೇನೆಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಕ್ರಯದ ಕರಾರು ಪತ್ರವನ್ನು ಅದೇ ದಿನ ಕ್ರಯಪತ್ರವನ್ನು ನೋಂದಣಿ ಮಾಡಿಕೊಳ್ಳುಬಹುದಾಗಿತ್ತು ಎಂದರೆ ಸಾಕ್ಷಿಯು ಮಾತುಕತೆಯಾಗಿದ್ದೆ ಕ್ರಯದ ಕರಾರು ಪತ್ರದ ವಿಚಾರ ಆಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಮಾರಟ ಮಾಡುವ ಉದ್ದೇಶವಿದ್ದರೇ ಆ ದಿನವೇ ಕ್ರಯ ಪತ್ರವನ್ನು ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮುಂದುವರೆದು ಪೂರ್ತಿ ಹಣ ಕಟ್ಟಲು ಅವರ ಬಳಿ ಹಣ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪೂರ್ತಿ ಹಣ ಕಟ್ಟಲು ಅವರ ಬಳಿ ಹಣ ಇರಲಿಲ್ಲ ಎಂಬ ವಿಚಾರವನ್ನು ನನಗೆ ಶಿವಣ್ಣರವರು ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನಿಪಿ1 ಕ್ರಯದ ಪತ್ರದಲ್ಲಿ ನಮೂದು ಮಾಡಿರುತ್ತೇನೆ. ನಾನು ಶಿವಣ್ಣ ರವರ ಕೋರಿಕೆ ಮೇರಿಗೆ ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.